ಕೋವಿಡ್‌ಗಿಂತ ಮೊದಲಿನ ತರಗತಿಗಳಲ್ಲಿ ಅವಳಿಗೆ ಒಳ್ಳೆಯ ಗೆಳೆಯನೇ ಆಗಿದ್ದ. ಕೋವಿಡ್ ಸಮಯದಲ್ಲಿ ಮನೆಯ ಒಳಗೇ ಇರಬೇಕಾದಾಗ ಜಾಸ್ತಿ ಟಿ.ವಿ, ಮೊಬೈಲ್‌ಗಳಿಗೆ ಅಂಟಿಬಿಟ್ಟಿದ್ದ. ಅವನನ್ನು ತುಂಬಾ ಹಚ್ಚಿಕೊಂಡು, ಬೆಳೆಸಿದ್ದ ಅಜ್ಜಿ ಇದೇ ಸಮಯದಲ್ಲಿ ಕಾಯಿಲೆಗೆ ತುತ್ತಾದರು ಮತ್ತು ಅಪ್ಪ-ಅಮ್ಮ ಹಲವು ರೀತಿಯ ಒತ್ತಡದಲ್ಲಿ ಸಿಕ್ಕು ಬಿಜಿ ಆಗಿಬಿಟ್ಟಿದ್ದರು. ಹಠಾತ್ತಾಗಿ ಅಜ್ಜಿ ತೀರಿಕೊಂಡಾಗ ಸೂರ್ಯನಿಗೆ ಅದನ್ನು ಒಪ್ಪಿಕೊಳ್ಳಲು ಕಷ್ಟವಾಯ್ತು. ಈ ಎಲ್ಲಾ ಬೇಸರ, ಗೊಂದಲ, ಕಿರಿಕಿರಿಗಳಿಂದ ತಪ್ಪಿಸಿಕೊಳ್ಳಲು ಒಂದೇ ದಾರಿಯಾಗಿ ಅವನು ಗ್ಯಾಜೆಟ್‌ಗಳನ್ನು ಹಿಡಿದಿದ್ದ. ಟಿವಿ, ಐಪಾಡ್, ಮೊಬೈಲ್ ಇವುಗಳಲ್ಲಿ ಯಾವುದಾದರೊಂದನ್ನು ಹಿಡಿದೇ ಇರುತ್ತಿದ್ದ. ಶಾಲೆ ಮುಗಿಸಿ ಮನೆಗೆ ಬಂದೊಡನೆ ಟಿವಿ ಆನ್ ಮಾಡಿಯೇ ಮುಂದಿನ ಕೆಲಸ ಮಾಡುತ್ತಿದ್ದ. ಸೂರ್ಯನ ಊಟ ತಿಂಡಿ, ಹೋಂವರ್ಕ್ ಎಲ್ಲವೂ ಟಿವಿ ಮುಂದೆಯೇ ಆಗುತ್ತಿತ್ತು.

ಮನೆಯಲ್ಲಿ ಯಾರ ಜೊತೆಯೂ ಹೆಚ್ಚು ಮಾತಾಡುತ್ತಿರಲಿಲ್ಲ. ಹಟ-ಕೋಪ-ಬೇಸರ-ಖುಷಿ-ಪ್ರೀತಿ ಯಾವುದೂ ಇಲ್ಲದೆ ಗ್ಯಾಜೆಟ್‌ನಲ್ಲೇ ಮುಳುಗಿರುತ್ತಿದ್ದ. ಸೂರ್ಯನಿಗೆ ಬುದ್ಧಿ ಹೇಳಲು ಅಪ್ಪ,ಅಮ್ಮ, ಟೀಚರ್ ಎಲ್ಲರೂ ಪ್ರಯತ್ನ ಪಟ್ಟಿದ್ದರು. ಎಲ್ಲರೂ ಹೇಳುವುದು ಕೇಳಿ, ಒಂದು ದಿನ ಸರಿ ಆದಂತೆ ಕಂಡರೂ ಮರು ದಿನದಿಂದ ಮತ್ತೆ ಎಲ್ಲವೂ ಮೊದಲಿನಂತೇ ನಡೆಯುತ್ತಿತ್ತು. ಹೆಚ್ಚು ಬಯ್ಯಲೂ ಆಗದೆ, ಬಯ್ದರೂ ಏನೂ ಭಾವನೆ ತೋರಿಸದೆ ಸುಮ್ಮನೆ ವಿಡಿಯೋ ಬದಲಾಯಿಸುವ ಮಗನನ್ನು ನೋಡಿ ಸ್ಮಿತಾ ಚಿಂತಿತರಾಗಿದ್ದರು. ಈಗ ಶಾಲೆಯ ಪ್ರವಾಸದ ಸುದ್ದಿ ಕೇಳಿ, ಸೂರ್ಯ ಮೊದಲಿನಂತಾಗಲು ಒಳ್ಳೆಯ ಅವಕಾಶ ಇದು ಎಂದು ಪ್ರವಾಸಕ್ಕೆ ಹೋಗಲು ಅವನಿಗೆ ಒತ್ತಾಯ ಮಾಡುತ್ತಿದ್ದರು.

ಫೋನ್‌ನಲ್ಲಿ ಮಾತನಾಡಿ ಮುಗಿಸಿದ ಅಮ್ಮ, ಶಾರ್ವಿಗೆ ಚುಟುಕಾಗಿ ಇದನ್ನು ತಿಳಿಸಿದರು. 'ಒಮ್ಮೆ ವಾತಾವರಣ ಬದಲಾಗಿ, ಮೊದಲು ಅವನ ಅಜ್ಜಿ ಅವನಿಗೆ ತೋರಿಸಿದ ಜಗತ್ತು-ಪ್ರೀತಿ ಸಿಕ್ಕಿದರೆ ಅವನಿಗೆ ಖುಷಿಯಾಗುತ್ತದೆ. ಆಗ ಸೂರ್ಯ ಮೊದಲಿನ ಥರ ಸರಿಯಾಗುತ್ತಾನೆ, ಅವನ ಒಳಗೆ ಇರುವ ಶಕ್ತಿ, ಚಟುವಟಿಕೆ ಹೊರಗೆ ಬರುತ್ತದೆ. ನಾವೆಲ್ಲಾ ಸೇರಿ ಸ್ಮಿತಾ ಆಂಟಿಗೆ ಸಹಾಯ ಮಾಡೋಣವಾ' ಎಂದು ಅಮ್ಮ ಕೇಳಿದಾಗ ಶಾರ್ವಿಗೆ ಹೇಗೆ ಸಹಾಯ ಮಾಡೋದು ಎಂದು ಕುತೂಹಲವಾಯಿತು. ಅಲ್ಲದೆ ಯಾವಾಗಲೂ ಅಡ್ವೆಂಚರ್ ಸಿರೀಸ್, ಮಿಸ್ಟರಿ ಸಿರೀಸ್ ಪುಸ್ತಕಗಳನ್ನು ಗುಡ್ಡೆ ಹಾಕಿಕೊಂಡು ಓದುತ್ತಿರುವ ಅವಳ ಅಣ್ಣನ ನೆನಪಾಯ್ತು. ಈ ಪುಸ್ತಕಗಳಲ್ಲಿನ ಡಿಟೆಕ್ಟಿವ್‌ಗಳು ಹಲವು ಥರದ ಸಾಹಸಗಳನ್ನು ಮಾಡುತ್ತಿರುತ್ತಾರೆ ಎಂದು ಅಣ್ಣ ಹೇಳುತ್ತಿದ್ದದ್ದು ನೆನಪಾಗಿ, ಅವನ ಸಹಾಯ ಕೇಳಲು ನಿರ್ಧರಿಸಿದಳು. ಅಣ್ಣ ನೋಡುವ 'ದರ್‌ಮನ್' ಮುಂತಾದ ವಿಡಿಯೊಗಳಲ್ಲಿ ಇರುವ ಒಳ್ಳೊಳ್ಳೆಯ ಐಡಿಯಾಗಳೂ ಇವರ ಜೊತೆಯಾದವು. ಇಬ್ಬರೂ ಸೇರಿ ಮಾಸ್ಟರ್ ಪ್ಲಾನ್ ಮಾಡಲು ಹೊರಟರು. ಪುಸ್ತಕಗಳಲ್ಲಿ ವಿವರಿಸುವ 'ಡೆಟೆಕ್ಟಿವ್'ಗಳು ತಾವೇ ಎಂಬ ಹೆಮ್ಮೆ ಅವರಲ್ಲಿ ಬಂದಿತ್ತು.

ಮೊದಲಿಗೆ, ಸೂರ್ಯನ ಅಜ್ಜಿ ಅವನಿಗೆ ಹೇಳುತ್ತಿದ್ದ, ಅವನಿಗೆ ಇಷ್ಟವಾದ ಕಥೆ-ಹಾಡುಗಳ ಪಟ್ಟಿ ಮಾಡಿ, ಅವುಗಳು ಯೂಟ್ಯೂಬ್‌ನಲ್ಲಿ ಇವೆಯಾ ಎಂದು ಪರೀಕ್ಷಿಸಿದರು. ಅವರು ಪ್ರವಾಸಕ್ಕೆ ಹೋಗುತ್ತಿರುವ ಜಾಗದ ಸೌಂದರ್ಯ ಮತ್ತು ಪ್ರಾಮುಖ್ಯತೆಯನ್ನು ತೋರಿಸುವ ವಿಡಿಯೊಗಳನ್ನು ಹುಡುಕಿದರು. ಅವನು ಯಾವಾಗಲೂ ಅವನ ಇಷ್ಟದ ಯೂಟ್ಯೂಬರ್ ಔಟ್‌ಡೋರ್ ಸ್ಟೇ ಬಗ್ಗೆ ಮಾಡಿದ ವಿಡಿಯೊಗಳನ್ನು ಲಿಸ್ಟ್ ಮಾಡಿದರು. ಹೊರಗಿನ ವಾತಾವರಣದಲ್ಲಿ ಇರುವಾಗ ಸಿಗುವ ಮಜಾ, ಸಂತೋಷ, ಜ್ಞಾನದ ಬಗ್ಗೆ ಅವನಿಗೆ ತಿಳಿಹೇಳುವ ವಿಡಿಯೊಗಳನ್ನು ಆಯ್ಕೆ ಮಾಡಿದರು.

ಆಮೇಲೆ ಇವೆಲ್ಲವನ್ನೂ ಅವರ ಮನೆಯ ವೈಫೈನಲ್ಲಿ, ಸೈನ್ ಇನ್ ಆಗಿರುವ ಅಕೌಂಟ್‌ನಿಂದಲೇ ಟಿವಿಯಲ್ಲಿ ಒಮ್ಮೆ ಸರ್ಚ್ ಮಾಡುವಂತೆ ಸ್ಮಿತಾ ಆಂಟಿಗೆ ತಿಳಿಸಿದರು. ಹಾಗೆ ಮಾಡಿದಾಗ, ಸೂರ್ಯ ಟಿವಿ ಆನ್ ಮಾಡಿದಾಗ ಇವೇ ಎಲ್ಲಾ ವಿಡಿಯೊಗಳು ಎದುರಿಗೆ ಕಾಣಿಸಿಕೊಳ್ಳುತ್ತವೆ ಎಂಬುದು ಅವರ ಪ್ಲಾನ್ ಆಗಿತ್ತು.

ಈ ಎಲ್ಲಾ ವಿಡಿಯೊಗಳನ್ನು ಹುಡುಕುತ್ತಾ ಹುಡುಕುತ್ತಾ ಶಾರ್ವಿಗೆ 'ಎಷ್ಟೆಲ್ಲಾ ವಿಷಯ ಇದೆ ಅಣ್ಣಾ ಈ ವಿಡಿಯೊಗಳಲ್ಲಿ' ಎಂದು ಅಚ್ಚರಿಯಾಯಿತು. ತಾವು ಮಾಡುತ್ತಿರುವ ಪ್ಲಾನ್ ಕೆಲಸ ಮಾಡುತ್ತದೆಯೋ